898 ಶ್ರೀ ಹ್ಯಾರಿಸ್ ಎನ್.ಎ.: ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ರಾಜ್ಯದಲ್ಲಿರುವ ಅಂಗನವಾಡಿ ಕೇಂದ್ರಗಳಿಗೆ ಬಿಸಿಯೂಟ ಸರಬರಾಜಿಗೆ ಸರ್ಕಾರದಿಂದ ಯಾವ ವ್ಯವಸ್ಥೆ ಮಾಡಲಾಗಿದೆ;

ಆ) ಅಂಗನವಾಡಿ ಕೇಂದ್ರಗಳಿಗೆ ಬಿಸಿಯೂಟ ಸರಬರಾಜು ಮಾಡುವುದನ್ನು ಖಾಸಗಿ ವಲಯಕ್ಕೆ ಒಪ್ಪಿಸಲಾಗಿದೆಯೇ; (ವಿವರ ನೀಡುವುದು)

ಇ) ಸ್ತ್ರೀಶಕ್ತಿ ಗುಂಪುಗಳು ಮತ್ತು ಸ್ವಸಹಾಯ ಸಂಘಗಳು ಸ್ಥಳೀಯವಾಗಿ ಅಂಗನವಾಡಿ ಕೇಂದ್ರಗಳಿಗೆ ಸ್ವಚ್ಛ ಹಾಗೂ ತಾಜಾ ಬಿಸಿಯೂಟ ಪೂರೈಸುತ್ತಿದ್ದು, ಸುವ್ಯವಸ್ಥೆಯನ್ನು ಬದಲಾವಣೆ ಮಾಡಲು ಕಾರಣಗಳೇನು; ಇದರಿಂದಾಗಿ ಸೇವೆ ಮಾಡುತ್ತಿದ್ದವರಿಗೆ ಅನ್ಯಾಯವಾಗುವುದಿಲ್ಲವೇ;

ಈ) ಖಾಸಗಿಯವರಿಗೆ ವಹಿಸಿಕೊಡುವ ಬದಲು ಮೊದಲಿದ್ದ ವ್ಯವಸ್ಥೆಯನ್ನೇ ಮುಂದುವರಿಸುವ ಕುರಿತು ಸರ್ಕಾರದ ನಿಲುವೇನು?

ಶ್ರೀ ಪಿ.ಎಂ. ನರೇಂದ್ರಸ್ವಾಮಿ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು):

ಅ) ರಾಜ್ಯದಲ್ಲಿರುವ ಅಂಗನವಾಡಿ ಕೇಂದ್ರಗಳ ಫಲಾನುಭವಿಗಳಿಗೆ ಈ ಕೆಳಕಂಡ ಆಹಾರ ವಿತರಿಸಲಾಗುತ್ತದೆ:

6 ತಿಂಗಳು – 3 ವರ್ಷದ ಮಕ್ಕಳು	ಅಮಲೈಸ್ಡ್ ಶಕ್ತಿಯುತ ಆಹಾರ ಪ್ರತಿ ದಿನ ರೂ. 4/– ಮೌಲ್ಯದ ಆಹಾರ ಮನೆಗಳಿಗೆ ನೀಡಲಾಗುತ್ತಿದೆ. ತೀವ್ರ ಅಪೌಷ್ಟಿಕ ಮಕ್ಕಳಿಗೆ ರೂ.6/– ಮೌಲ್ಯದ ಆಹಾರ ವಿತರಿಸಲಾಗುತ್ತದೆ.
3 ರಿಂದ 6 ವರ್ಷದ ಮಕ್ಕಳು ಅಂಗನವಾಡಿ ಕಾರ್ಯಕರ್ತೆ/ ಅಂಗನವಾಡಿ ಸಹಾಯಕಿ/ ಪ್ರಾಯಪೂರ್ವ ಬಾಲಕಿಯರು	ವಾರದಲ್ಲಿ 2 ದಿನ ಅಮಲೈಸ್ಡ್ ಶಕ್ತಿಯುತ ಆಹಾರ ಮತ್ತು ವಾರದಲ್ಲಿ 4 ದಿನ ಅಕ್ಕಿಯಿಂದ ತಯಾರಿಸಿದ ಸಿಹಿ ಪೊಂಗಲ್/ ಚಿತ್ರಾನ್ನ ಅಂಗನವಾಡಿ ಕೇಂದ್ರದಲ್ಲಿ ತಯಾರಿಸಿ ವಿತರಿಸಲಾಗುವುದು. ಮಕ್ಕಳಿಗೆ ಪ್ರತಿದಿನ ರೂ. 4/– ಮೌಲ್ಯದ ಆಹಾರ ಹಾಗೂ

	ಅಂಗನವಾಡಿ ಕಾರ್ಯಕರ್ತೆ/ಅಂಗನವಾಡಿ ಸಹಾಯಕಿ/ ಪ್ರಾಯ ಪೂರ್ವ ಬಾಲಕಿಯರಿಗೆ ರೂ. 5/– ಮೌಲ್ಯದ ಆಹಾರ ವಿತರಿಸಲಾಗುವುದು. ತೀವ್ರ ಅಪೌಷ್ಟಿಕ ಮಕ್ಕಳಿಗೆ ರೂ. 6/– ಮೌಲ್ಯದ ಆಹಾರ ವಿತರಿಸಲಾಗುವುದು.
ಗರ್ಭಿಣಿ/ಬಾಣಂತಿಯರಿಗೆ	ಅಕ್ಕಿ, ಹೆಸರುಕಾಳು ಮತ್ತು ಶಕ್ತಿಯುತ ಆಹಾರ ಮನೆಗೆ ನೀಡಲಾಗುವುದು. ಪ್ರತಿ ಫಲಾನುಭವಿಗೆ ಪ್ರತಿ ದಿನ ರೂ. 5/– ಮೌಲ್ಯದ ಆಹಾರ ವಿತರಿಸಲಾಗುವುದು.

ಆ) ಇಲ್ಲ.

ಅಂಗನವಾಡಿ ಕೇಂದ್ರಗಳಿಗೆ ಅಗತ್ಯವಿರುವ ಆಹಾರವನ್ನು ಈ ಕೆಳಕಂಡ ಮೂಲಗಳಿಂದ ಸಂಗ್ರಹಿಸಲಾಗುವುದು:

1) ಪಡಿತರ ಅಕ್ಕಿ, ಗೋಧಿ	ಭಾರತ ಆಹಾರ ನಿಗಮ
2) ತಾಳೆ ಎಣ್ಣೆ	ಕರ್ನಾಟಕ ಎಣ್ಣೆ ಬೀಜ ಬೆಳೆಗಾರರ ಒಕ್ಕೂಟ
3) ಐಯೋಡಿನ್‌ಯುಕ್ತ ಉಪ್ಪು	ಕರ್ನಾಟಕ ಆಹಾರ ನಾಗರೀಕ ಸರಬರಾಜು ನಿಗಮ
4) ಇತರೆ ಆಹಾರ ಸಾಮಗ್ರಿಗಳು ಹೆಸರುಕಾಳು, ಕಡಲೆಬೇಳೆ, ಬೆಲ್ಲ, ಸಾಸಿವೆ, ಮೆಣಸಿನಕಾಯಿ	ಕೆಟಿಪಿಪಿ ಕಾಯ್ದೆಯಡಿ ತಾಲ್ಲೂಕು ಮಟ್ಟದಲ್ಲಿ ಟೆಂಡರ್ ಕರೆದು ಸ್ಥಳೀಯ ಮಹಿಳಾ ಮಂಡಳಿ/ ಸ್ವಸಹಾಯ ಸಂಘ, ಸ್ತ್ರೀಶಕ್ತಿ ಗುಂಪುಗಳಿಂದ ಖರೀದಿಸಲಾಗುವುದು
5) ಶಕ್ತಿಯುತ ಆಹಾರ ಮತ್ತು ಅಮಲೈಸ್ಡ್ ಶಕ್ತಿಯುತ ಆಹಾರ	ಟೆಂಡರ್‌ನಲ್ಲಿ ವಿಜೇತರಾದ ಸಾಮರ್ಥ್ಯ ನಿರ್ಮಾಣಗಾರರಾದ ಮೆ. ಕ್ರಿಸ್ಟಿ ಫ್ರೈಡ್‌ಗ್ರಾಂ ಇಂಡಸ್ಟ್ರೀಸ್, ಬಾಲಗಾರನಹಳ್ಳಿ, ನೆರಳೂರು ಅಂಚೆ, ಆನೇಕಲ್ ತಾಲ್ಲೂಕು,

	ಬೆಂಗಳೂರು ಇವರಿಂದ ಖರೀದಿಸಲಾಗುತ್ತಿದೆ. ದಿನಾಂಕ 1.8.2009 ರಿಂದ 137 ತಾಲ್ಲೂಕುಗಳಲ್ಲಿ ಮಹಿಳಾ ಪೌಷ್ಟಿಕ ಆಹಾರ ಉತ್ಪಾದನಾ ಘಟಕಗಳ ಮುಖಾಂತರ ಖರೀದಿಸಲಾಗುವುದು. ಪ್ರತಿ MSPC ಯಲ್ಲಿ ಇಲಾಖೆಯಿಂದ ಆಯ್ಕೆಯಾದ 22 ಜನ ಸ್ವಸಹಾಯ ಸಂಘದ ಸದಸ್ಯರು ಹಾಗೂ ಫಲಾನುಭವಿ ತಾಯಿಂದಿರು ಇದ್ದು ಇವರಿಗೆ ತರಬೇತಿಯನ್ನು ನೀಡಲಾಗುತ್ತಿದೆ. ಸದರಿ ಮಹಿಳಾ ಆಹಾರ ತರಬೇತಿ ಹಾಗೂ ಉತ್ಪಾದನಾ ಘಟಕಗಳು ರಚನೆಯ ವಿವಿಧ ಹಂತದಲ್ಲಿ ಇರುತ್ತವೆ. 48 ಘಟಕಗಳು ಆಹಾರ ಸರಬರಾಜಿಗೆ ಸನ್ನದ್ಧವಾಗಿರುತ್ತವೆ.

ಇ) ಮಾನ್ಯ ಸರ್ವೋಚ್ಚ ನ್ಯಾಯಾಲಯದ ಸಾರ್ವಜನಿಕ ಹಿತಾಸಕ್ತಿ ರಿಟ್ ಅರ್ಜಿ ಸಂ: 196/2001ರನ್ವಯ ದಿನಾಂಕ 4.10.2004 ಹಾಗೂ ದಿನಾಂಕ 13.12.2006 ಆದೇಶಗಳನ್ವಯ ಅಂಗನವಾಡಿ ಕೇಂದ್ರಗಳ ಫಲಾನುಭವಿಗಳಿಗೆ ಅಗತ್ಯವಿರುವ ಆಹಾರ ಸಾಮಗ್ರಿಗಳನ್ನು ಗುತ್ತಿಗೆದಾರರಿಂದ ಖರೀದಿಸಬಾರದು ಮತ್ತು ಅಂಗನವಾಡಿ ಫಲಾನುಭವಿಗಳಿಗೆ ಅಗತ್ಯವಿರುವ ಆಹಾರ ಪದಾರ್ಥಗಳು ಸ್ಥಳೀಯ ಮಹಿಳಾ ಮಂಡಳಿ ಹಾಗೂ ಸ್ವಸಹಾಯ ಗುಂಪುಗಳು, ಗ್ರಾಮ ಸಮುದಾಯದಿಂದ ಖರೀದಿಸಲು ಆದೇಶಿಸಲಾಗಿದೆ. ಈ ಆದೇಶದ ಅನುಷ್ಠಾನಕ್ಕಾಗಿ ರಾಜ್ಯ ಸರ್ಕಾರ 2 ವರ್ಷ ಕಾಲಾವಧಿ ತೆಗೆದುಕೊಂಡಿದ್ದು, ಸ್ಥಳೀಯ ಸ್ವಸಹಾಯ ಸಂಘ, ಮಹಿಳಾ ಪೌಷ್ಟಿಕ ಆಹಾರ ಉತ್ಪಾದನಾ ಕೇಂದ್ರಗಳನ್ನು ರಚಿಸಿ, ಯಂತ್ರೋಪಕರಣಗಳನ್ನು ಸ್ಥಾಪಿಸಿ ಸದಸ್ಯರಿಗೆ ತರಬೇತಿ ನೀಡಲು ಸಾಮರ್ಥ್ಯ ನಿರ್ಮಾಣಗಾರರನ್ನು (ಕೆಪಾಸಿಟಿ ಬಿಲ್ಡರ್) ಟೆಂಡರ್ ಮೂಲಕ ಆಯ್ಕೆ ಮಾಡಿದ್ದು ಸದರಿ ಕೆಪಾಸಿಟಿ ಬಿಲ್ಡರ್‌ರವರು ಸಾಮರ್ಥ್ಯ ನಿರ್ಮಾಣ ಕಾರ್ಯದಲ್ಲಿ ತೊಡಗಿದ್ದು, ಈ ತಿಂಗಳ ಅಂತ್ಯದೊಳಗೆ ಗುರುತಿಸಿರುವ ಎಲ್ಲಾ 137 ಉತ್ಪಾದನಾ ಕೇಂದ್ರಗಳನ್ನು ಸ್ಥಾಪಿಸಿ ದಿನಾಂಕ

1.8.2009 ರಿಂದ ಅಂಗನವಾಡಿಗಳಿಗೆ ಅಗತ್ಯವಿರುವ ಪೌಷ್ಟಿಕ ಆಹಾರ ಉತ್ಪಾದಿಸಿ ಸರಬರಾಜು ಮಾಡಲಾಗುವುದು. ಈ ಎಂ.ಎಸ್.ಪಿ.ಸಿ.ಗಳು ಸ್ತ್ರೀಶಕ್ತಿ ಸಂಘದ ಸದಸ್ಯರು, ವಿಧವೆಯರು, ಪರಿತ್ಯಕ್ತರು, ವಿಕಲಾಂಗರು ಹಾಗೂ ಫಲಾನುಭವಿಗಳ ತಾಯಂದಿರನ್ನು ಒಳಗೊಂಡಿರುವುದರಿಂದ ಸ್ತ್ರೀಶಕ್ತಿ ಗುಂಪುಗಳು ಹಾಗೂ ಸ್ವ-ಸಹಾಯ ಸಂಘಗಳಿಗೆ ಅನ್ಯಾಯವಾಗುವುದಿಲ್ಲ.

ಈ) ರಾಜ್ಯ ಸರ್ಕಾರವು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದನ್ವಯ ದಿನಾಂಕ 7.5.2007ರಲ್ಲಿ ಸಲ್ಲಿಸಿರುವ ಪ್ರಮಾಣ ಪತ್ರದಂತೆ ಕ್ರಮವನ್ನು ವಹಿಸಲಾಗುತ್ತಿದೆ.

ಶ್ರೀ ಎನ್.ಎ. ಹ್ಯಾರಿಸ್: ಅಂಗನವಾಡಿ ಕೇಂದ್ರಗಳಿಗೆ ಬಿಸಿಯೂಟ ಸರಬರಾಜು ಮಾಡುವುದನ್ನು ಖಾಸಗಿ ವಲಯಕ್ಕೆ ಒಪ್ಪಿಸಲಾಗಿದೆಯೇ ಎಂದು ಕೇಳಿದ್ದಕ್ಕೆ ಉತ್ತರದಲ್ಲಿ ಇಲ್ಲವೆಂದು ತಿಳಿಸುತ್ತಾರೆ. ಅದೇ ಉತ್ತರದಲ್ಲಿ ಎ.ಆರ್.ಇ.ಎಫ್. ಮೆ: ಕ್ರಿಸ್ಟಿ ಫ್ರೈಡ್ ಗ್ರಾಂ ಇಂಡಸ್ಟ್ರೀಸ್, ಇದು ಸರ್ಕಾರದ ಯೂನಿಟ್ ಅಥವಾ ಖಾಸಗಿ ಯೂನಿಟ್ ಎಂದು ನನಗೆ ತಿಳಿಯಲಿಲ್ಲ. ಏಕೆಂದರೆ ಅಂಗನವಾಡಿಗಳಲ್ಲಿ ಮೊದಲು ಸ್ತ್ರೀ ಶಕ್ತಿ ಮೂಲಕ ನಾವು ಇದನ್ನು ಮಾಡುತ್ತಿದ್ದೆವು. ಈಗ ಏನಾಗಿದೆಯೆಂದರೆ ಸ್ತ್ರೀಶಕ್ತಿಯನ್ನು ಬಿಟ್ಟು ಹೊರಗಡೆಯಿಂದ ಪ್ರೈವೇಟ್ ಎಂಟರ್‌ಪ್ರೈಸಸ್‌ನಿಂದ ತರುವಂಥ ಪ್ರಯತ್ನ ಮಾಡುತ್ತಿದ್ದಾರೆ, ಇದರಿಂದ ಲೋಕಲ್‌ನಲ್ಲಿರುವಂಥ ಜನಕ್ಕೆ ಆಗುತ್ತಿರುವಂಥ ಅನುಕೂಲಗಳು ಕಡಿಮೆಯಾಗುತ್ತದೆ, ಸ್ತ್ರೀಶಕ್ತಿಯಿಂದ ಒಳ್ಳೆಯ ಕೆಲಸವಾಗುತ್ತಿತ್ತು. ಅದಿಲ್ಲದೆ ಸ್ತ್ರೀ ಶಕ್ತಿಗೆ ಕೊಡಬೇಕೆಂದು already Supreme Courtನಿಂದ ಒಂದು ಆರ್ಡರ್ ಕೂಡ ಇದೆ, ಅದನ್ನು ತಾವು ಎರಡು ವರ್ಷಗಳ ಸಮಯವೆಂದು ಹೇಳಿದ್ದೀರಿ, ಯಾವ ದಿನಾಂಕದಿಂದ ಎರಡು ವರ್ಷಗಳ ಸಮಯ ತೆಗೆದುಕೊಂಡಿದ್ದೀರಿ ಎಂದು ಕೂಡ ಇದರಲ್ಲಿ ಸ್ಪಷ್ಟವಾಗಿ ಹೇಳಿಲ್ಲ. ಅದರೊಂದಿಗೆ ಪ್ರೈವೇಟ್‌ನವರಿಗೆ ಇದನ್ನು ಕೊಡುವುದನ್ನು ನಿಲ್ಲಿಸಿ ಆದಷ್ಟು ಸ್ತ್ರೀಶಕ್ತಿ ಗುಂಪಿನಿಂದ ಮಾಡಬೇಕೆಂಬ ಅಪೇಕ್ಷೆಯನ್ನು ನಾನು ಇಲ್ಲಿಡುತ್ತಿದ್ದೇನೆ.

ಶ್ರೀ ಪಿ.ಎಂ. ನರೇಂದ್ರಸ್ವಾಮಿ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು): 01.08.2009 ರಿಂದ 31.07.2014 ರವರೆಗೆ ಈ ಎ.ಆರ್.ಇ.ಎಫ್. ನಿಶ್ಚಿತ ಆಹಾರವನ್ನು ಎಂ.ಎಸ್.ಪಿ.ಸಿ. ಮೂಲಕ ಸರಬರಾಜು ಮಾಡುತ್ತದೆ, ಈ

ಒಂದು ಸಂದರ್ಭದಲ್ಲಿ ಎಂ.ಎಸ್.ಪಿ.ಸಿ.ಗಳನ್ನು ತಯಾರು ಮಾಡುವುದಕ್ಕೋಸ್ಕರ ಮತ್ತು ಅವುಗಳನ್ನು ಈ ಒಂದು ತರಬೇತಿ ಕಾರ್ಯಕ್ರಮದಲ್ಲಿ ಒಳಪಡಿಸಿ ಗುಣಮಟ್ಟದ ಆಹಾರವನ್ನು ಒದಗಿಸುವುದಕ್ಕೋಸ್ಕರ ಈಗ ನಾವು ಈ ಒಂದು ಮೆ. ಕ್ರಿಸ್ಪಿ ಫ್ರೈಡ್‌ಗ್ರಾಂ ಇಂಡಸ್ಟ್ರೀಸ್ ಅವರನ್ನೇ ನಾವು ಈಗ ಪ್ರಮೋಟರ್ ಆಗಿ ಇಟ್ಟುಕೊಂಡಿರುವುದರಿಂದ ಆ ಒಂದು ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ಎಂ.ಎಸ್.ಪಿ.ಸಿ. ಮೂಲಕ ಆಹಾರವನ್ನು ಒದಗಿಸುವಂಥ ಕ್ರಮವನ್ನು ನಾವು ಈಗಾಗಲೇ ಜಾರಿಗೊಳಿಸಿದ್ದೇವೆ. ಮುಂದಿನ ತಿಂಗಳಿನಿಂದ ಯಾವುದೇ ಟೆಂಡರ್ ಪ್ರಕ್ರಿಯೆ ಇಲ್ಲ, ಯಾವುದೇ ಆಹಾರ ಪದಾರ್ಥವನ್ನು ಕರ್ನಾಟಕ ರಾಜ್ಯದಲ್ಲಿ ನಮ್ಮ ಇಲಾಖೆಯಿಂದ ಟೆಂಡರ್ ಪ್ರಕ್ರಿಯೆ ಇಲ್ಲದೇನೆ ಯಾವುದೇ ಒಬ್ಬ ಮಧ್ಯವರ್ತಿ ಇಲ್ಲದೆ ಒದಗಿಸುವಂಥ ಕಾರ್ಯವನ್ನು ನಾವು ಮಾಡಿದ್ದೇವೆ.

ಶ್ರೀ ಎನ್.ಎ. ಹ್ಯಾರಿಸ್: ಸ್ತ್ರೀಶಕ್ತಿ ಗುಂಪಿನವರಿಗೆ ಇರುವುದೇ ಅಡಿಗೆ ಮಾಡುವ ಕೆಲಸ, ಅವರಿಗೆ ಏನು ತರಬೇತಿ ಕೊಡುತ್ತೀರಿ ಎಂಬುದು ನನಗೆ ಅರ್ಥವಾಗಲಿಲ್ಲ. ಅಡಿಗೆ ಮಾಡಲಿಕ್ಕೆ ಅವರಿಗೆ ತರಬೇತಿ ಕೊಟ್ಟರೆ ಇನ್ನೇನು ತರಬೇತಿಯನ್ನು ಅವರಿಗೆ ಕೊಡಬೇಕಾಗಬಹುದು.

ಶ್ರೀ ಪಿ.ಎಂ. ನರೇಂದ್ರಸ್ವಾಮಿ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು): ನಮ್ಮ ಇಲಾಖೆ ಮೂಲಕ ಮತ್ತು ಈಗ ಸಿ.ಎಫ್.ಟಿ.ಆರ್.ಐ. ಮೂಲಕ ಇವರಿಗೆಲ್ಲಾ ತರಬೇತಿ ಕೊಟ್ಟಿದ್ದಾಗಿದೆ, ಎಲ್ಲಾ ಒಂದು ತಾಲ್ಲೂಕು ಮಟ್ಟದ ಎಂ.ಎಸ್.ಪಿ.ಸಿ.ಗಳು ಸಹ ಇದರಲ್ಲಿ ಜವಾಬ್ದಾರಿಯನ್ನು ಹೊರುವಂಥ ಶಕ್ತಿಯನ್ನು ಹೊಂದಿದ್ದಾರೆ. ಇನ್ನು ಮುಂದಿನ ದಿನಮಾನಗಳಲ್ಲಿ ಈ ಕಾರ್ಯಕ್ರಮವನ್ನು ಜಾರಿಗೊಳಿಸುತ್ತಿದ್ದೇವೆ.

ಶ್ರೀ ಎನ್.ಎ. ಹ್ಯಾರಿಸ್: ಉತ್ತರ ಕೊಟ್ಟಿರುವುದು ನಮಗೆ ಕ್ಲಿಯರ್ ಆಗಬೇಕು. ಸುಪ್ರೀಂಕೋರ್ಟ್‌ನಿಂದ ಎರಡು ವರ್ಷ ಸಮಯ ಕೇಳಿದ್ದೀರಿ, ಆ ಸಮಯವನ್ನು ಯಾವ ದಿನಾಂಕದಿಂದ ಯಾವ ದಿನಾಂಕದವರೆಗೆ ತಾವು ಕೇಳಿರುವುದು?

ಶ್ರೀ ಪಿ.ಎಂ. ನರೇಂದ್ರಸ್ವಾಮಿ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು):
ಆ ಸಮಯ ಮುಗಿದಿದೆ, ಮುಂದಿನ ತಿಂಗಳಿನಿಂದ ಸುಪ್ರೀಂಕೋರ್ಟ್ ಆದೇಶದನ್ವಯ ನಾವು ಈ ಕಾರ್ಯಕ್ರಮವನ್ನು ಎಂ.ಎಸ್.ಪಿ.ಸಿ. ಮೂಲಕ ಜಾರಿಗೊಳಿಸುತ್ತಿದ್ದೇವೆ.

ಶ್ರೀ ಎನ್.ಎ. ಹ್ಯಾರಿಸ್: ಪ್ರಶ್ನೆ ಅದಲ್ಲ, ಮುಂದಿನ ತಿಂಗಳಿನಿಂದ ಪ್ರಾರಂಭಿಸುತ್ತಾರೆ, ಒಳ್ಳೆಯದು.

ಉಪಾಧ್ಯಕ್ಷರು: ವಾಯಿದೆ ಮುಗಿದಿದೆ, ಮುಂದಿನ ತಿಂಗಳಿನಿಂದ ಪ್ರಾರಂಭ ಮಾಡುತ್ತೇವೆಂದು ಸ್ಪಷ್ಟವಾಗಿ ಹೇಳಿದ್ದಾರೆ. ಆಯಿತು.

ಶ್ರೀ ಯು.ಟಿ. ಖಾದರ್: ಈಗಾಗಲೇ ಅಂಗನವಾಡಿಗಳಿಗೆ ಪೌಷ್ಟಿಕ ಆಹಾರ ಕೊಡುತ್ತಿದ್ದಾರೆ. Date expiry ಆಗಿರುವಂತಹ ಆಹಾರವನ್ನು ನೀಡಲಾಗುತ್ತಿದೆ. ಇದರಿಂದ ಜನರು ವಿಶ್ವಾಸ ಕಳೆದುಕೊಂಡಿದ್ದಾರೆ. ಇದರ ಬದಲಿಗೆ Alternative food ಬಿಸ್ಕತ್ತು ಕೊಟ್ಟರೆ ಬಹಳ ಉತ್ತಮವೆಂದು ನನಗೆ ಅನಿಸುತ್ತದೆ. ಎರಡನೇಯದು ಮಕ್ಕಳಿಗೆ ಔಷಧಗಳನ್ನು ಇವತ್ತು ಕೊಡುತ್ತಿದ್ದಾರೆ. ಸಣ್ಣ ಮಕ್ಕಳಿಗೆ ಔಷಧಗಳನ್ನು special ಆಗಿ ಕೊಡುವುದಿಲ್ಲ. ಅದು ಮಕ್ಕಳಿಗಾಗಿ ತಯಾರಾಗುತ್ತಿದೆ. ದೊಡ್ಡವರ syrup ಅನ್ನು ಸಣ್ಣ ಮಕ್ಕಳಿಗೆ ಸ್ವಲ್ಪ ಕೊಡುತ್ತಿರುವುದು ಸರಿಯಲ್ಲವೆಂದು ಸಚಿವರ ಗಮನಕ್ಕೆ ತರುವುದಕ್ಕೆ ಇಚ್ಛಿಸುತ್ತೇನೆ.

ಶ್ರೀ ನರೇಂದ್ರಸ್ವಾಮಿ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು): ಈ ಯೋಜನೆ ಕೇಂದ್ರ ಸರ್ಕಾರದಿಂದ ಅನುಮೋದಿತವಾಗಿರುವ ಯೋಜನೆ. ಅವರು ನೀಡುವ ಮಾರ್ಗಸೂಚಿಯನ್ವಯ ನಾವು ಕ್ರಮ ವಹಿಸಬೇಕಾಗುತ್ತದೆ. ಹಾಗಾಗಿ, ಪೂರಕವಾದ ಪೌಷ್ಟಿಕ ಆಹಾರವನ್ನು, ಅವರ guidelinesನಲ್ಲಿ ಇರುವಂಥ ಆಹಾರವನ್ನು ಒದಗಿಸುವಂಥಾದ್ದು ಮತ್ತು ಔಷಧಿ ವಿತರಣೆಯಲ್ಲಿ ಯಾವುದೇ ಲೋಪ ಕಂಡುಬಂದಿಲ್ಲ. ತಾವು ಕೇಳಿದಂಥ ಪ್ರಶ್ನೆಯಲ್ಲಿ ಈ ಅವಧಿ ಮೀರಿದಂಥ ಸಂದರ್ಭದಲ್ಲಿ ಅಂತಹ ಆಹಾರವನ್ನು ಒದಗಿಸಿದ್ದಾರೆ ಎನ್ನುವುದು. ಇದರ ಬಗ್ಗೆ ಆರು ಜನ CDPOಗಳನ್ನು ಈಗಾಗಲೇ ನಾವು ಸಸ್ಪೆಂಡ್ ಮಾಡಿ

ಅವರ ಮೇಲೆ ಕ್ರಮ ಜರುಗಿಸಿದ್ದೇವೆ. ಅದರಲ್ಲಿ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯೂ ಒಳಪಟ್ಟಿದೆ ಎನ್ನುವುದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಯು.ಟಿ. ಖಾದರ್: ನಾನು ಕೇಳುವುದು ಏನೆಂದರೆ, ಯಾರು ನಿಜವಾಗಿ ತಪ್ಪಿತಸ್ಥರಿದ್ದಾರೆ, ಏಕೆಂದರೆ, ಇವತ್ತು ಯುವ–ಸಂಘಟನೆ ಇದೆ, ಅದನ್ನು ಹುಡುಕುವಂಥ ಕೆಲಸವಿದೆ. ಇವತ್ತು ಅವರ ಮೇಲೆ ಕೇಸ್ ಹಾಕಿದ್ದಾರೆ, ಇವತ್ತು actually ಆ ಸಂಘಟನೆಯನ್ನು ಸನ್ಮಾನಿಸಬೇಕಾಗಿತ್ತು.

ಶ್ರೀ ಪಿ.ಎಂ. ನರೇಂದ್ರಸ್ವಾಮಿ: ಸನ್ಮಾನ್ಯ ಸದಸ್ಯರೇ, ಇವತ್ತು ತಮಗೆ ಒಂದು clarification ಕೊಡುವಂಥಾದ್ದು. ಇದಕ್ಕೆ ಸಂಬಂಧಪಟ್ಟಂಥ ಇಲಾಖೆ ಇದೆ, ಇಲಾಖೆಯಲ್ಲಿ ಅಧಿಕಾರಿಗಳು ಇದ್ದಾರೆ, ಯಾವುದೋ ಒಂದು ಸಂಸ್ಥೆಯ ಹೆಸರಿನಲ್ಲಿ ಹೋಗಿ ದಾಳಿ ಮಾಡುವುದು, ದಬ್ಬಾಳಿಕೆ ಮಾಡುವುದನ್ನು ಸರ್ಕಾರ ಸಹಿಸುವುದಿಲ್ಲ. ಇದು ನಮ್ಮ ಅಧಿಕಾರಿಗಳ ಮೇಲೆ ನಡೆಯುತ್ತಿದೆ. ಆ ಅಂಗನವಾಡಿ ಕಟ್ಟಡದಲ್ಲಿ ಒಬ್ಬಳು ಹೆಣ್ಣುಮಗಳು ಇರುತ್ತಾಳೆ. ಅವರು ಕೆಲಸ ನಿರ್ವಹಿಸುವ ಸಂದರ್ಭದಲ್ಲಿ ಕೆಲವೊಂದು communist organisations ಈ ಒಂದು ತಪ್ಪನ್ನು ಮಾಡಿವೆ. ಅದನ್ನು ಸರ್ಕಾರ ಯಾವುದೇ ಕಾರಣಕ್ಕೂ ಸಹಿಸುವುದಿಲ್ಲ. ಅವರ ದೂರುಗಳು ಏನೇ ಇದ್ದರೂ ಸರ್ಕಾರಕ್ಕೆ ಸಲ್ಲಿಸಲಿ. ಅವರು ನೇರವಾಗಿ ಕ್ರಮ ತೆಗೆದುಕೊಳ್ಳುವುದಕ್ಕೆ ನಾವು ಅವರಿಗೆ ಅಧಿಕಾರ ಕೊಟ್ಟಿಲ್ಲ. ಇದನ್ನು ತಮ್ಮ ಗಮನಕ್ಕೆ ತರುತ್ತೇನೆ.

ಶ್ರೀ ಯು.ಟಿ. ಖಾದರ್: ಮಾನ್ಯ ಉಪಾಧ್ಯಕ್ಷರೆ, ಇದಕ್ಕೆಲ್ಲಾ ಅವಕಾಶ ಕೊಟ್ಟಿದ್ದು ಯಾರು? ಯಾರು ಸುಪ್ರೀಂ ಆಗಿರುವಂಥ ಅಧಿಕಾರಿ ಇದ್ದಾರೆ, ಅವರು ಸರಿಯಾಗಿ ವ್ಯವಸ್ಥೆ ಮಾಡಿದ್ದರೆ ಇದಕ್ಕೆ ಅವಕಾಶವಾಗುತ್ತಿರಲಿಲ್ಲ. ಪ್ರಮುಖವಾಗಿ ಇದರ ಬಗ್ಗೆ ಯಾರು ಜವಾಬ್ದಾರರು ಇದ್ದಾರೆ, ಅವರ ಮೇಲೆ ಶಿಕ್ಷೆ ಕ್ರಮ ತೆಗೆದಕೊಳ್ಳಿ ಎನ್ನುವುದು ನಾನು ಹೇಳುವುದು.

ಶ್ರೀ ಪಿ.ಎಂ. ನರೇಂದ್ರಸ್ವಾಮಿ: ಪದೇ ಪದೇ ಹೇಳುತ್ತಿದ್ದೇನೆ. ಈ ವಿಚಾರದಲ್ಲಿ ಆಹಾರದಿಂದ ಎಲ್ಲೂ, ಯಾವುದೇ ಕೇಂದ್ರದಲ್ಲೂ, ಇಡೀ ಕರ್ನಾಟಕ ರಾಜ್ಯದಲ್ಲಿ ಆಹಾರದಿಂದಾಗಿ ತಪ್ಪಾಗಿದೆ, ಆರೋಗ್ಯ ಹದಗೆಟ್ಟಿದೆ ಅಥವಾ ಹೊಟ್ಟೆ ಹಾಳಾಗಿದೆ ಎನ್ನುವ ಒಂದೇ ಒಂದು ಸಣ್ಣ ದೂರು ಸಹ

ರಾಜ್ಯದಲ್ಲಿ ಇಲ್ಲ ಎನ್ನುವ ವಿಷಯವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ.

(ಗೊಂದಲ)

ಶ್ರೀ ಎ.ಎಸ್. ಪಾಟೀಲ್ ನಡಹಳ್ಳಿ: ಸನ್ಮಾನ್ಯ ಸಚಿವರೆ, ತಾವೇ ಉತ್ತರ ಕೊಟ್ಟಿದ್ದೀರಿ. ಸನ್ಮಾನ್ಯ ಉಪಾಧ್ಯಕ್ಷರೆ, ಸಚಿವರು ಹೇಳಿರತಕ್ಕಂಥ ಉತ್ತರದಲ್ಲಿ, ಮಂಗಳೂರಿನಲ್ಲಿ ನಡೆದಿರತಕ್ಕಂಥ ಘಟನೆ ಬಗ್ಗೆ ಪತ್ರಿಕೆಗಳಲ್ಲಿ ಬಂದಿದೆ. ಅದರ ಬಗ್ಗೆ ನಾವು ಪ್ರಶ್ನೆ ಕೇಳಿದ್ದೇವೆ. ಅದಕ್ಕೆ ಉತ್ತರವನ್ನು ಕೂಡ ತಾವು ಕೊಟ್ಟಿದ್ದೀರಿ. ಮಂಗಳೂರು ಜಿಲ್ಲೆಯಲ್ಲಿ ಸುಮಾರು 240 ಕೇಂದ್ರಗಳಲ್ಲಿ ಇವತ್ತು ನೀವು date expiry ಆಗಿರತಕ್ಕಂಥ ಆಹಾರ ಧಾನ್ಯಗಳನ್ನು ಒದಗಿಸಿರತಕ್ಕಂಥಾದ್ದನ್ನು ತಾವೇ ಒಪ್ಪಿಕೊಂಡಿದ್ದೀರಿ. ಇವತ್ತು ಇಲ್ಲಿ ಇಡೀ ಕರ್ನಾಟಕ ರಾಜ್ಯದಲ್ಲಿ ಎಲ್ಲಿಯೂ ದೂರು ಬಂದಿಲ್ಲ ಎಂದು ಹೇಳುತ್ತಿದ್ದೀರಿ. ಇದಕ್ಕೆ ದಯಮಾಡಿ ಸಚಿವರು ಸ್ಪಷ್ಟವಾದ ಉತ್ತರ ಕೊಡಬೇಕಾಗುತ್ತದೆ.

ಉಪಾಧ್ಯಕ್ಷರು: ದಯಮಾಡಿ ಕುಳಿತುಕೊಳ್ಳಿ.

ಶ್ರೀ ಎ.ಎಸ್. ಪಾಟೀಲ್ ನಡಹಳ್ಳಿ: ಏಕೆಂದರೆ ಇದು ಕೇವಲ ಮಂಗಳೂರಿನಲ್ಲಿ ಮಾತ್ರ ನಡೆದಿಲ್ಲ. ಇದು ಅನೇಕ ಜಿಲ್ಲೆಗಳಲ್ಲಿ ನಡೆದಿದೆ. ಮಂಗಳೂರಿನಲ್ಲಿ ನಡೆದಿರುವ ಒಂದೇ ಘಟನೆ ಮಾತ್ರ ಸಾರ್ವಜನಿಕವಾಗಿ ಗೊತ್ತಾಗಿದೆ. ದಯಮಾಡಿ ಸಚಿವರು ಇದಕ್ಕೆ ಉತ್ತರ ಕೊಡಬೇಕು.

ಅಧ್ಯಕ್ಷರು: ಆಯಿತು ಮುಂದಿನ ಪ್ರಶ್ನೆ ಕೇಳಿ.

ಶ್ರೀ ಎ.ಎಸ್. ಪಾಟೀಲ್ ನಡಹಳ್ಳಿ: ಮಾನ್ಯ ಉಪಾಧ್ಯಕ್ಷರೆ, ದಯಮಾಡಿ ಇದಕ್ಕೆ ನಾವು ಸಚಿವರಿಂದ ಉತ್ತರ ಬಯಸುತ್ತೇವೆ. ಏಕೆಂದರೆ ಇದು ಇಡೀ ರಾಜ್ಯಕ್ಕೆ ಸಂಬಂಧಪಟ್ಟಿರುವುದು. ಕೇವಲ ಸುಮ್ಮನೆ ಅವರು ಹಾರಿಕೆ ಉತ್ತರ ಕೊಡುವುದಕ್ಕೆ ಆಗುವುದಿಲ್ಲ.

ಉಪಾಧ್ಯಕ್ಷರು: ಅವರು ಕೇಳಿರುವ ಪ್ರಶ್ನೆಗೆ ಇದು ಸಂಬಂಧಿಸುವುದಿಲ್ಲ.

ಶ್ರೀ ಎ.ಎಸ್. ಪಾಟೀಲ್ ನಡಹಳ್ಳಿ: ಸನ್ಮಾನ್ಯ ಉಪಾಧ್ಯಕ್ಷರೆ, ದಯಮಾಡಿ ಅವರು ಉತ್ತರ ಹೇಳಲಿ. ಇದು ಒಂದು ಕ್ಷೇತ್ರಕ್ಕೆ ಮಾತ್ರ ಸಂಬಂಧಪಟ್ಟಿದ್ದಲ್ಲ.

ಮಾನ್ಯ ಸಚಿವರು ಉತ್ತರ ಕೊಡುವುದಕ್ಕೆ ready ಇದ್ದಾರೆ. ತಾವು ಅವಕಾಶ ಕೊಡಬೇಕು.

(ಗೊಂದಲ)

ಶ್ರೀ ಪಿ.ಎಂ. ನರೇಂದ್ರ ಸ್ವಾಮಿ: ಗೌರವಾನ್ವಿತ ಸದಸ್ಯರು ಒಂದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಬೇಸಿಗೆ ರಜೆ ಸಂದರ್ಭದಲ್ಲಿ ಕೆಲವೊಂದು ಮಕ್ಕಳು ಅಂಗನವಾಡಿ ಕೇಂದ್ರಗಳಿಗೆ ಬರುವುದಿಲ್ಲ. ಇವರು indent ಹಾಕಿ, ನಮ್ಮ CDPOಗಳ ಮುಖಾಂತರ ಆಹಾರ ಪದಾರ್ಥಗಳನ್ನು ಏನು ಖರೀದಿಸಿರುತ್ತಾರೆ, ಅದು ಕೆಲವೊಂದು ಸಲ ಸ್ಟಾಕ್ ಉಳಿದುಕೊಂಡಿದ್ದು ನಮ್ಮ ಗಮನಕ್ಕೆ ಬಂದಿದೆ. ಇದು ತನಿಖೆ ಹಂತದಲ್ಲಿದೆ. ಈ ಹಂತದಲ್ಲಿ ಉತ್ತರ ಕೊಡಿ ಎಂದರೆ ಹೇಗೆ? ತನಿಖೆ ಪೂರ್ಣಗೊಳ್ಳದೇ ಉತ್ತರ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಇಲ್ಲಿ ತಪ್ಪಿತಸ್ಥರು ಎಂದು ಕಂಡವರನ್ನು prima-facie ಎಲ್ಲಿಗೆ ಬಂದಿದೆ, ಅವರ ಮೇಲೆ ನಾವು ಕ್ರಮ ತೆಗೆದುಕೊಂಡು ಸಸ್ಪೆಂಡ್ ಮಾಡಿದ್ದೇವೆ.

(ಗೊಂದಲ)

ಉಪಾಧ್ಯಕ್ಷರು: ಇದನ್ನು ಮುಗಿಸಿದ್ದೇನೆ. ಮುಂದಿನ ಪ್ರಶ್ನೆ.

ಶ್ರೀ ಎ.ಎಸ್. ಪಾಟೀಲ್ ನಡಹಳ್ಳಿ: ಅಲ್ಲಿ ಇದಕ್ಕೆ ಉತ್ತರ ಕೊಟ್ಟಿದ್ದಾರೆ. ಅಲ್ಲಿ ನಡೆದಿದೆ ಎಂದು ಉತ್ತರ ಕೊಟ್ಟಿದ್ದೀರಿ, ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ನಮಗೆ ಹೇಳಿ?

ಉಪಾಧ್ಯಕ್ಷರು: ಈ ಪ್ರಶ್ನೆಯನ್ನು ಮುಗಿಸಿದ್ದೇವೆ. please ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಯು.ಟಿ. ಖಾದರ್: ಹೆಚ್ಚಿನ ಹಣಕ್ಕಾಗಿ indent ಹಾಕಿದ್ದೀರಿ ಏಕೆ? ಯಾರು indent ಹಾಕಿದ್ದಾರೆ, ಅವರು ಜವಾಬ್ದಾರಿ ವಹಿಸಬೇಕಲ್ಲವೇ? ಅವರನ್ನು ಬಿಟ್ಟು ಬೇರೆಯವರ ಮೇಲೆ ಏಕೆ ಗೂಬೆಯನ್ನು ಕೂರಿಸುವಂಥ ಕೆಲಸವಾಗುತ್ತಿದೆ ಎಂದು ನಾವು ಕೇಳುವುದು.

ಉಪಾಧ್ಯಕ್ಷರು: ಈಗ ಈ ಪ್ರಶ್ನೆಯಲ್ಲಿ ಅದು ಬರುವುದಿಲ್ಲ. ನೀವು ಅದನ್ನು ಬೇರೆ ರೀತಿಯಲ್ಲಿ ತನ್ನಿ. ನೀವು ಕೇಳಿದ ಪ್ರಶ್ನೆಗಳಿಗೆ ಈಗಲೇ ಮಾಹಿತಿ

ಬೇಕು ಎಂದರೆ ಎಲ್ಲಿಂದ ತರುತ್ತಾರೆ? ಮುಂದಿನ ಪ್ರಶ್ನೆಯನ್ನು ಕೇಳೋಣ. please ಕುಳಿತುಕೊಳ್ಳಿ. ನಾನು ಮುಂದಿನ ಪ್ರಶ್ನೆಗೆ ಹೋಗುತ್ತೇನೆ. ಈ ಪ್ರಶ್ನೆಯನ್ನು ಮುಕ್ತಾಯಗೊಳಿಸಲಾಗಿದೆ. ಮಾನ್ಯ ಜೆ.ಡಿ.ನಾಯ್ಕರವರ ಪ್ರಶ್ನೆಗೆ ಮಾನ್ಯ ಸಚಿವರು ಒಂದು ವಾರ ಕಾಲಾವಕಾಶ ಕೇಳಿದ್ದಾರೆ. ಮುಂದಿನ ಸಲ ಆ ಪ್ರಶ್ನೆಯನ್ನು ತೆಗೆದುಕೊಳ್ಳೋಣ. ಮಾನ್ಯ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪರವರು ಇದ್ದಾರೆಯೇ? ಇಲ್ಲ. ಮಾನ್ಯ ಈಶ್ವರ ಭೀಮಣ್ಣ ಖಂಡ್ರೆಯವರು ಕೇಳಬೇಕು.

811 ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ: ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಸ್ತ್ರೀಶಕ್ತಿ ಗುಂಪುಗಳನ್ನು ಬಲಪಡಿಸಲು ತಾಲ್ಲೂಕು ಕೇಂದ್ರಗಳಲ್ಲಿ ಸ್ತ್ರೀಶಕ್ತಿ ಭವನಗಳನ್ನು ನಿರ್ಮಾಣ ಮಾಡುವ ಯೋಜನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಕಳೆದ ಸಾಲಿನಲ್ಲಿ ಬೀದರ್ ಜಿಲ್ಲೆಯ ಯಾವ ತಾಲ್ಲೂಕುಗಳಲ್ಲಿ ಈ ಭವನಗಳನ್ನು ನಿರ್ಮಾಣ ಮಾಡಲಾಗಿದೆ. ಇದಕ್ಕಾಗಿ ವೆಚ್ಚ ಮಾಡಿರುವ ಹಣವೆಷ್ಟು; ಭವನವಾರು ವಿವರ ಒದಗಿಸುವುದು;

ಇ) ಹಿಂದುಳಿದ ಭಾಲ್ಕಿ ತಾಲ್ಲೂಕಿನಲ್ಲಿ ಈ ಭವನ ಕಾರ್ಯ ನಿರ್ವಹಿಸುತ್ತಿದೆಯೇ;

ಈ) ಇಲ್ಲದಿದ್ದಲ್ಲಿ, ಪ್ರಸಕ್ತ ಸಾಲಿನಲ್ಲಿ ಭಾಲ್ಕಿ ತಾಲ್ಲೂಕಿನಲ್ಲಿ ಈ ಭವನವನ್ನು ನಿರ್ಮಿಸಲಾಗುವುದೇ?

ಶ್ರೀ ಪಿ.ಎಂ. ನರೇಂದ್ರಸ್ವಾಮಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವರು):

ಅ) ಹೌದು ಸ್ತ್ರೀಶಕ್ತಿ ಗುಂಪುಗಳನ್ನು ಬಲಪಡಿಸಲು ರಾಜ್ಯದ 175 ತಾಲ್ಲೂಕುಗಳಲ್ಲಿ ಹಂತ ಹಂತವಾಗಿ ಸ್ತ್ರೀಶಕ್ತಿ ಭವನ ನಿರ್ಮಿಸುವ ಯೋಜನೆಯನ್ನು 2007–08ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಈ ನಿಟ್ಟಿನಲ್ಲಿ 2007–08ರಲ್ಲಿ 41 ತಾಲ್ಲೂಕು ಭವನಗಳನ್ನು, 2008–09ರಲ್ಲಿ 46